

# ಜಿಂಜರ್ ಲಿಲ್ಲಿ

■ ಸುಹಾನಿ ಬಡೆಕ್ಕಿಲ



ಈ ಹೂವಿನ ಹೆಸರೇ ಟಾರ್ಚ್ ಜಿಂಜರ್ ಲಿಲ್ಲಿ. ನೋಡಲು ಟಾರ್ಚ್ ಆಕಾರದಲ್ಲಿರುವ ಕಾರಣ ಈ ಹೆಸರು ಬಂದಿದೆ. ಇದನ್ನು ಟಾರ್ಚ್ ಶುಂಠಿ ಹೂ, ಕೆಂಪು ಶುಂಠಿ, ಶುಂಠಿ ಲಿಲ್ಲಿ ಮತ್ತು ಕಾಡು ಶುಂಠಿ ಎಂದೂ ಕರೆಯುತ್ತಾರೆ.

ಟಾರ್ಚ್ ಜಿಂಜರ್ ಲಿಲ್ಲಿ ಗಿಡದ ಎತ್ತರ ಸಾಮಾನ್ಯ 17 ರಿಂದ 20 ಅಡಿ ಇರುತ್ತದೆ. ಹೂಗಳ ಬಣ್ಣ ಕೆಂಪು, ಗುಲಾಬಿ ಅಥವಾ ಕಿತ್ತಾಳೆ ಇರುತ್ತದೆ. ಈ ಹೂವಿನ ಎಲೆಗಳಲ್ಲಿ ಅತಿಯಾದ ಉತ್ಕರ್ಷಣ ನಿರೋಧಕ ಶಕ್ತಿಯಿದೆ. ಇದರ ಗಡ್ಡೆಯನ್ನು ಹೂ ತೋಟದಲ್ಲಿ ನೆಟ್ಟರೆ ಸಾಕು, ತಾನಾಗಿ ಬೆಳೆಯುತ್ತದೆ. ಒಂದು ಜಾತಿಯ ಮೂಲಿಕೆಯ ಸಸ್ಯವಿದು. ಬೆಳೆಯಲು ದೀರ್ಘಾವಧಿ ಬೇಕು. ಆದರೆ ವಿಶೇಷವಾದ ಆರೈಕೆ ಮಾಡುವ ಅಗತ್ಯವಿಲ್ಲ. ಬಹುತೇಕ ಎಲ್ಲ ಹವಾಮಾನಗಳಲ್ಲೂ ಈ ಗಿಡ ಬೆಳೆಯುತ್ತದೆ.

ಹೂ ಬಿಡುವ ಕಾಂಡದ ಎಲೆಗಳ ಬುಡ ವಿಭಿನ್ನವಾಗಿರುತ್ತದೆ. ಎಲೆಗಳು 1.5 ಮೀ ಉದ್ದವಿದ್ದು ಹಾಗೂ ಸುತ್ತ ಜೋಡಿಸಿದಂತೆ ಕಾಣಿಸುತ್ತದೆ. ಟಾರ್ಚ್ ಜಿಂಜರ್ ಲಿಲ್ಲಿಯ ಹಣ್ಣು ಅತ್ಯಂತ ಹುಳಿ. ಇದನ್ನು ತಿನ್ನುವವರೂ ಇದ್ದಾರೆ. ಹೂವನ್ನು ಹೆಚ್ಚಾಗಿ ಅಲಂಕಾರಕ್ಕೆ ಬಳಸುತ್ತಾರೆ. ಮಾರುಕಟ್ಟೆಯಲ್ಲಿ ಈ ಹೂವಿಗೆ ವಿಶೇಷ ಬೇಡಿಕೆಯಿದೆ. ಏಷ್ಯದ ಕೆಲವು ದೇಶಗಳಲ್ಲಿ ಹೂವನ್ನು ಅಡುಗೆಯಲ್ಲಿ ಬಳಸುತ್ತಾರೆ. ಉತ್ತರ ಸುಮಾತ್ರಾದಲ್ಲಿ ಹೂವಿನ ಮೊಗ್ಗುಗಳನ್ನು ಬಳಸಿ ತಯಾರಿಸುವ ಆರಸಿಕ್ ಇಕನ್ ಮಾಸ್ ಎಂಬ ಖಾದ್ಯ ಜನಪ್ರಿಯ. ಸೂಪ್ ಹಾಗೂ ಸಲಾಡ್ ನಲ್ಲೂ ಈ ಮೊಗ್ಗುಗಳನ್ನು ಬಳಸುತ್ತಾರೆ.